


# ಲೈವ್ ಪಂಕ್ಚರ್

## ಇದು ಪಂಕ್ಚರಂಗಡಿ ಆ್ಯಪ್

**ನಿರ್ಜನ ಪ್ರದೇಶದಲ್ಲಿ ಟೈರ್ ಪಂಕ್ಚರ್ ಆದರೆ ಏನು ಮಾಡುವಿರಿ? ಚಿಂತೆ ಬಿಟ್ಟು ಪ್ಲೇಸ್ಟೋರ್‌ನಲ್ಲಿ ಲಭ್ಯವಿರುವ 'ಲೈವ್ ಪಂಕ್ಚರ್' ಆ್ಯಪ್ ತೆರೆದು ಸನಿಹದ ಪಂಕ್ಚರ್ ಅಂಗಡಿಯವರನ್ನು ಸಂಪರ್ಕಿಸಿ. ಅವರು ನೀವಿದ್ದಲ್ಲಿಗೆ ಬಂದು ಪಂಕ್ಚರ್ ಹಾಕಿಕೊಡುತ್ತಾರೆ.**

■ **ಶಶಿಕುಮಾರ್ ಸಿ.**

ಊಟಕ್ಕೆ ಸ್ವಿಗ್ಗಿ–ಜೊಮೆಟೊ, ಶಾಪಿಂಗ್‌ಗೆ ಅಮೆಜಾನ್–ಫ್ಲಿಪ್‌ಕಾರ್ಟ್, ಹಣ ವರ್ಗಾವಣೆಗೆ ಫೋನ್ ಪೇ – ಗೂಗಲ್ ಪೇ… ವಾಹನದ ಪಂಕ್ಚರ್‌ಗೆ?

ಕಲ್ಲು, ಮುಳ್ಳು, ಮೊಳೆಗಳ ಹೊಡೆತವು ಸೇರಿದಂತೆ ನಾನಾ ಕಾರಣಕ್ಕೆ ಎಲ್ಲೆಂದರಲ್ಲಿ ವಾಹನಗಳ ಟೈರ್ ಪಂಕ್ಚರ್ ಆದಾಗ ಪ್ರತಿ ಚಾಲಕನ ಮನದಲ್ಲಿ ಮೂಡುವ ಪ್ರಶ್ನೆಯಿದು. ಬೇರೆಲ್ಲ ಸೇವೆಗಳು ಬೆರಳ ತುದಿಗೆ ಬಂದಿರುವಾಗ ಪಂಕ್ಚರ್ ಸೇವೆ ಯಾಕಿಲ್ಲ ಎಂದು ಕಾಡುತ್ತಿದ್ದ ಪ್ರಶ್ನೆಗೆ 'ಲೈವ್ ಪಂಕ್ಚರ್' ಆ್ಯಪ್ ಉತ್ತರವಾಗಿದೆ.

ಮಾರ್ಗಮಧ್ಯೆ ಟೈರ್ ಪಂಕ್ಚರ್ ಆಗಿ ಸಂಕಷ್ಟಕ್ಕೀಡಾಗುವ ವಾಹನ ಸವಾರರಿಗೆ ನೆರವಾಗುವ ಉದ್ದೇಶದಿಂದ ಬೆಂಗಳೂರಿನ 'ಬ್ಲಾಕ್ ಪೆನ್ ಕಮ್ಯುನಿಕೇಷನ್' ಸಹಯೋಗದೊಂದಿಗೆ ಈ ಆ್ಯಪ್ ಅಭಿವೃದ್ಧಿಗೊಂಡಿದ್ದು, ಪ್ಲೇ ಸ್ಟೋರ್‌ನಲ್ಲಿ ಲಭ್ಯವಿದೆ. ಡೌನ್‌ಲೋಡ್ ಮಾಡಿಕೊಂಡು ಉಚಿತವಾಗಿ ಬಳಸಬಹುದು. ವಾಹನ ಸವಾರರು ಇದ್ದಲ್ಲಿಗೆ ಬಂದು ಪಂಕ್ಚರ್ ಸೇವೆಯನ್ನು ಕಲ್ಪಿಸಿಕೊಡುವುದು ಈ ಆ್ಯಪ್‌ನ ವಿಶೇಷ.

'ಪಂಕ್ಚರ್ ಸರ್ವಿಸ್ ಅನ್ನು ಕಲ್ಪಿಸುವ ಸಲುವಾಗಿ ಪಂಕ್ಚರ್ ಅಂಗಡಿ ಹಾಗೂ ವಾಹನ ಸವಾರರ ನಡುವೆ ಸಂಪರ್ಕ ಸೇತುವೆಯಾಗಿ ಆ್ಯಪ್ ನಿಲ್ಲುತ್ತದೆ. ಪಂಕ್ಚರ್ ಅಂಗಡಿಯಲ್ಲಿ ಕೆಲಸ ಮಾಡುವವರು ಅಸಂಘಟಿತ ಕಾರ್ಮಿಕರಾಗಿದ್ದು, ತಂತ್ರಜ್ಞಾನವನ್ನು ಬಳಸಿಕೊಂಡು ಅವರ ಸೇವೆಯನ್ನು ಮತ್ತಷ್ಟು ವಿಸ್ತರಿಸಿ ಆರ್ಥಿಕವಾಗಿ ಸಹಾಯವಾಗುವಂತೆ ಮಾಡುವುದು ಆ್ಯಪ್‌ನ ಮುಖ್ಯ ಉದ್ದೇಶವಾಗಿದೆ. ಕಂಪನಿಗೆ ಯಾವುದೇ ರೀತಿಯ ಕಮಿಷನ್ ಸಹ ಕೊಡಬೇಕಾಗಿಲ್ಲ. ಈ ಅಸಂಘಟಿತ ಕಾರ್ಮಿಕರಿಗೆ ಅನುಕೂಲವಾಗಲೆಂದು ಆ್ಯಪ್ ಅಭಿವೃದ್ಧಿಪಡಿಸಿ ಉಚಿತವಾಗಿ ಒದಗಿಸಲಾಗಿದೆ' ಎಂಬುದು ಆ್ಯಪ್‌ನ ಸಹ ಸಂಸ್ಥಾಪಕ, ಕೋಲಾರ ಮೂಲದ ಸಮೀರ್ ದಳಸನೂರು ಮಾತು.

ಯಾವುದೇ ಭಾಗದ ಪಂಕ್ಚರ್ ಅಂಗಡಿಯವರು ಈ ಆ್ಯಪ್ ಸೇರಿ ತಮ್ಮ ಕಾಯಕ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳಬಹುದು. ಆ್ಯಪ್ ಬಳಸಿ ಸೇವೆ ಪಡೆಯುವ ವಾಹನ ಸವಾರರು ಪಂಕ್ಚರ್ ಅಂಗಡಿ ಮಾಲೀಕರಿಗೆ ಅವರ ಸೇವೆಗನುಗುಣವಾಗಿ ಹಣ ಪಾವತಿಸಬೇಕಾಗುತ್ತದೆ. ಪಂಕ್ಚರ್ ಅಂಗಡಿ, ವಾಹನ ಸವಾರರ ನಡುವೆ ಸಂಪರ್ಕ ಸೇತುವೆಯಾಗಿ ನಿಲ್ಲುವುದಷ್ಟೇ ಆ್ಯಪ್‌ನ ಕಾಯಕ.

ಪಂಕ್ಚರ್ ಅಂಗಡಿಯವರು ಮತ್ತು ದ್ವಿಚಕ್ರ ವಾಹನ ಸವಾರರನ್ನು ಉದ್ದೇಶವಾಗಿಟ್ಟುಕೊಂಡು ಈ ಆ್ಯಪ್ ಅನ್ನು ಡೆವಲಪ್ ಮಾಡಲಾಗಿದೆ. ಸಾಮಾನ್ಯವಾಗಿ ಕಾರುಗಳಲ್ಲಿ ಹೆಚ್ಚುವರಿಯಾಗಿ ಚಕ್ರವಿರುತ್ತದೆ. ಒಂದು ಟೈರ್ ಪಂಕ್ಚರ್ ಆದಾಗ ಹೆಚ್ಚುವರಿ ಚಕ್ರ ಬಳಸಿಕೊಳ್ಳಬಹುದು. ಆದರೆ ಬೈಕ್‌ನಲ್ಲಿ ಹಾಗಾಗುವುದಿಲ್ಲ. ಟ್ಯೂಬ್‌ಲೆಸ್ ಟೈರ್ ಇದ್ದರೂ ಕೆಲವೊಮ್ಮೆ ಪಂಕ್ಚರ್ ಸಮಸ್ಯೆ ಇನ್ನಿಲ್ಲದಂತೆ ಕಾಡುತ್ತದೆ. ಅಂತಹ ಸಂದರ್ಭದಲ್ಲಿ ಆ್ಯಪ್ ನೆರವಿಗೆ ನಿಲ್ಲುತ್ತದೆ.




### ಬಳಕೆ-ಕಾರ್ಯ ಹೇಗೆ?

ಲೈವ್ ಪಂಕ್ಚರ್ ಎಂಬ ಆ್ಯಪ್ ತಮಗಾಗಿ ಇದೆ ಎಂಬುದನ್ನು ಸಾಧ್ಯವಾದಷ್ಟು ಮಟ್ಟಿಗೆ ಎಲ್ಲ ಪಂಕ್ಚರ್ ಅಂಗಡಿ ಮಾಲೀಕರಿಗೆ ತಿಳಿಸಲಾಗುವುದು. ಆ್ಯಪ್‌ಗೆ ಸೇರುವುದು ಬಿಡುವುದು ಅವರ ಇಚ್ಛೆ. ಆ್ಯಪ್‌ಗೆ ಸೇರಬಯಸುವವರು ಮೊದಲು ತಮ್ಮ ಹೆಸರು, ಅಂಗಡಿಯ ಹೆಸರು, ಮೊಬೈಲ್ ಸಂಖ್ಯೆ ಹಾಗೂ ಪಂಕ್ಚರ್ ಅಂಗಡಿ ಇರುವ ವಿಳಾಸದ ಲೊಕೇಷನ್ ಅನ್ನು ಆ್ಯಪ್‌ನಲ್ಲಿ ನಮೂದಿಸಬೇಕು. ಹೀಗೆ ನಮೂದಿಸಿದ ನಂತರ ಆ್ಯಪ್‌ನ ನಿರ್ವಹಣೆ ಮಾಡುತ್ತಿರುವವರಿಗೆ ಸಂದೇಶ ರವಾನೆಯಾಗುತ್ತದೆ. ಅವರು ಆ ಎಲ್ಲ ಮಾಹಿತಿ ಪರಿಶೀಲಿಸಿ ಆ್ಯಪ್ ಸೇರಲು ಅಪ್ರೂವ್ ಮಾಡಿದ ನಂತರ ಸೇವೆ ಒದಗಿಸಬಹುದು.

ವಾಹನ ಸವಾರರೂ ಸಹ ತಮ್ಮ ಹೆಸರು, ಮೊಬೈಲ್ ಸಂಖ್ಯೆಯೊಂದಿಗೆ ಆ್ಯಪ್‌ಗೆ ನೋಂದಾಯಿಸಿಕೊಳ್ಳಬೇಕು. ಪಂಕ್ಚರ್ ಸೇವೆ ಅಗತ್ಯವಿದ್ದಾಗ ಆ್ಯಪ್ ತೆರೆದರೆ ತಮ್ಮ ಸುತ್ತ ಮುತ್ತಲಿರುವ ಪಂಕ್ಚರ್ ಅಂಗಡಿಗಳ ಮಾಹಿತಿ ಲಭ್ಯವಾಗುತ್ತದೆ. ಮೊಬೈಲ್ ಸಂಖ್ಯೆಯೂ ಸಿಗುತ್ತದೆ. ಯಾರು ತಮಗೆ ಸನಿಹವಿದ್ದಾರೆಯೋ ಅಂಥವರಿಗೆ ಕರೆ ಮಾಡಿ ಪಂಕ್ಚರ್ ಸೇವೆಗೆ ವಿನಂತಿಸಿಕೊಳ್ಳಬಹುದು.

ಉದಾಹರಣೆಗೆ, ನೀವು ಎಲ್ಲಿಗಾದರೂ ವಾಹನದಲ್ಲಿ ಹೋಗುವಾಗ ಟೈರ್ ಪಂಕ್ಚರ್ ಆದರೆ ಕೂಡಲೇ ಆ್ಯಪ್ ಮೂಲಕ ಹತ್ತಿರದಲ್ಲಿರುವ ಪಂಕ್ಚರ್ ಅಂಗಡಿಯವರನ್ನು ಸಂಪರ್ಕಿಸಿ, ನೀವಿದ್ದಲ್ಲಿಗೆ ಅವರನ್ನು ಕರೆಸಿಕೊಳ್ಳಬಹುದು. ಪಂಕ್ಚರ್ ಅಂಗಡಿಯವರು ಎಷ್ಟು ಹೊತ್ತಿಗೆ ತಲುಪುತ್ತಾರೆ ಎಂದು ತಿಳಿಯಬಹುದು. ಅವರು ಎಲ್ಲಿ ಬರುತ್ತಿದ್ದಾರೆ ಎಂಬುದನ್ನೂ ಲೈವ್ ಲೊಕೇಷನ್‌ನಲ್ಲಿ ನೋಡಬಹುದು. ■